ನಕ್ಷತ್ರ ಪಟ



ಶರಣು ಚಟ್ಟಿ

ಕಲೆ: ರೂಪಶ್ರೀ ಕಲ್ಲಿಗನೂರು

# ಮಸಾಲೆ ದೋಸೆ

ಅಪ್ಪನೊಡನೆ ಸಂತೆಗೆಂದು
ಪೇಟೆಗೆ ಹೋರಟೆನು
ದಾರಿಯಲ್ಲಿ ನಡೆಯುವಾಗ
ಉಡುಪಿ ಹೊಟೆಲ್ ಕಂಡೆನು

ಅಪ್ಪನನ್ನು ತಡೆದು ನಾನು
ಬಹಳ ಹಸಿವು ಎಂದೆನು
ಹೊಟೆಲ್ ಒಳಗೆ ಕೂರುತಲಿ
ಮಸಾಲೆ ದೋಸೆ ಬೇಡಿದೆನು

ತುಸು ಸಮಯ ಕಳೆಯಲು
ಮಸಾಲೆ ದೋಸೆ ಬಂದಿತ್ತು
ಆಲೂ ಪಲ್ಯ ಸಾಂಬಾರ್ ಚಟ್ನಿ
ಬಾಯಲ್ಲಿ ನೀರು ತಂದಿತ್ತು

ಗರಿ ಗರಿಯಾದ ಮಸಾಲೆ ದೋಸೆ
ತಟ್ಟೆ ಹೊರಗೂ ಚಾಚಿತ್ತು
ನಗುತ ನಾನು ಗಬ ಗಬ ತಿನ್ನಲು
ನಾಲಿಗೆ ತುಂಬಾ ರುಚಿಯಿತ್ತು

ಕೇಳಿದ್ದು ಕೊಡಿಸಿದ ಅಪ್ಪನಿಗೆ
ಧನ್ಯವಾದ ಹೇಳಿದೆನು
ಮಸಾಲೆ ದೋಸೆ ಗುಂಗಿನಲ್ಲೇ
ಊರಿನತ್ತ ಮರಳಿದೆನು

